ಡಿಸೆಂಬರ್-2020

ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

ಪರಿಹಾರ parihara ನೀರು ಮತ್ತು ನೈರ್ಮಲ್ಯ 9480985555

ಸ್ವಚ್ಛ ಭಾರತ ಒಂದು ಹೆಜ್ಜೆ ಸ್ವಚ್ಛತೆಯ ಕಡೆಗೆ

# ಸ್ವಚ್ಛತಾವಾಣಿ

**ವಾರ್ತಾಪತ್ರ**

ಸ್ವಚ್ಛಮೇವ ಜಯತೇ SWACHHA MEVA JAYATE

ಸ್ವಚ್ಛ ಸಂಕೀರ್ಣ

## “ನೂರು ದಿನಗಳ ವಿಶೇಷ ಆಂದೋಲನ”

ಕೇಂದ್ರ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಜಲ ಶಕ್ತಿ ಮಿಷನ್, ಭಾರತ ಸರ್ಕಾರವು “ಜಲ ಜೀವನ್ ಮಿಷನ್” ಯೋಜನೆಯಡಿ ರಾಜ್ಯದ **ಅಂಗನವಾಡಿ ಕೇಂದ್ರ, ಶಾಲೆ, ಆಶ್ರಮ ಶಾಲೆಗಳಿಗೆ** ಕಾರ್ಯಾತ್ಮಕ ನಳ ಸಂಪರ್ಕದ ಮೂಲಕ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ವಿಶೇಷ 100 ದಿನಗಳ ಆಂದೋಲನವನ್ನು ಆಯೋಜಿಸಿದೆ. ಈ ಆಂದೋಲನದ ಅಂಗವಾಗಿ ರಾಜ್ಯದಲ್ಲಿ ಈಗಾಗಲೇ ನಳ ಸಂಪರ್ಕ ಇಲ್ಲದ 15,999 ಶಾಲೆ, 32,710 ಅಂಗನವಾಡಿ ಕೇಂದ್ರ ಹಾಗೂ 10 ಆಶ್ರಮ ಶಾಲೆಗಳನ್ನು ಗುರುತಿಸಲಾಗಿದ್ದು, ಈ ಪೈಕಿ ಈಗಾಗಲೇ 10,864 ಶಾಲೆಗಳು, 21,384 ಅಂಗನವಾಡಿ ಕೇಂದ್ರಗಳು ಹಾಗೂ 10 ಆಶ್ರಮ ಶಾಲೆಗಳಿಗೆ ಕಾರ್ಯಾತ್ಮಕ ನಳ ಸಂಪರ್ಕದ ಮೂಲಕ ಕುಡಿಯುವ ನೀರನ್ನು ಒದಗಿಸಲು ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಇದರಲ್ಲಿ 1,019 ಶಾಲೆಗಳು ಮತ್ತು 2,602 ಅಂಗನವಾಡಿ ಕೇಂದ್ರಗಳಿಗೆ ನಳ ಸಂಪರ್ಕ ಮೂಲಕ ನೀರಿನ ಸಂಪರ್ಕವನ್ನು ಕಲ್ಪಿಸಿಕೊಡಲಾಗಿದೆ.





## ತರಬೇತಿ ಕಾರ್ಯಕ್ರಮಗಳು

### ದ್ರವ ತ್ಯಾಜ್ಯ ನಿರ್ವಹಣೆ ಕುರಿತ ತರಬೇತಿ ಕಾರ್ಯಕ್ರಮ:

ದ್ರವ ತ್ಯಾಜ್ಯ ನಿರ್ವಹಣೆ ಕುರಿತು, ಸ್ವಚ್ಛ ಭಾರತ್ ಮಿಷನ್(ಗ್ರಾ) ಯೋಜನೆಯಡಿ ರಾಜ್ಯ ಕಛೇರಿಯಲ್ಲಿ ಕಾರ್ಯನಿರ್ವಹಿಸುತ್ತಿರುವ **SLWM/IEC/SH/Sanitation Engineer/Documentation Specialist** ಸಮಾಲೋಚಕರುಗಳಿಗೆ ದಿನಾಂಕ: 21.12.2020ರಂದು ತರಬೇತಿ ನೀಡಲಾಯಿತು. ಒಂದು ದಿನ ನಡೆದ ಈ ಕಾರ್ಯಕ್ರಮದಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಉಪ ನಿರ್ದೇಶಕರು ಸೇರಿದಂತೆ **CDD** ಸಂಸ್ಥೆಯ ಸಂಪನ್ಮೂಲ ವ್ಯಕ್ತಿಗಳು ತರಬೇತಿ ನೀಡಿದರು.





### ಜಲ ಜೀವನ್ ಮಿಷನ್(JJM) ಯೋಜನೆ ಕುರಿತ ರಾಜ್ಯ ಮಟ್ಟದ ತರಬೇತಿ:

ಜಲ ಜೀವನ್ ಮಿಷನ್ ಯೋಜನೆ ಕುರಿತಂತೆ ದಿನಾಂಕ 23, 24 ಮತ್ತು 29, 30ನೇ ಡಿಸೆಂಬರ್ ಗಳಂದು ಜಿಲ್ಲೆಗಳಲ್ಲಿ ಯೋಜನೆಯಡಿ ಕಾರ್ಯನಿರ್ವಹಿಸುತ್ತಿರುವ ಜಿಲ್ಲಾ ಯೋಜನಾ ವ್ಯವಸ್ಥಾಪಕರು(**DPM**) ಮತ್ತು **ISA** ತಂಡದ ನಾಯಕರಿಗೆ ಯೋಜನೆಯ ಅನುಷ್ಠಾನ ಮತ್ತು **IEC/HRD** ಚಟುವಟಿಕೆಗಳ ಅನುಷ್ಠಾನ ಹಾಗೂ ಸಿಬ್ಬಂದಿಗಳ ಕರ್ತವ್ಯ ಜವಾಬ್ದಾರಿ ಕುರಿತು 2 ಬ್ಯಾಚ್‌ಗಳಲ್ಲಿ ತರಬೇತಿಯನ್ನು ನೀಡಲಾಯಿತು. ತರಬೇತಿ ಕಾರ್ಯಕ್ರಮದಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಒಟ್ಟು 60 ಜನರು ತರಬೇತಿಯನ್ನು ಪಡೆದುಕೊಂಡರು. 2 ಬ್ಯಾಚ್‌ಗಳಲ್ಲಿ ಒಟ್ಟು ನಾಲ್ಕು ದಿನಗಳ ಕಾಲ ನಡೆದ ಈ ತರಬೇತಿಯಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ಮುಖ್ಯ ಅಭಿಯಂತರರು, ನಿರ್ದೇಶಕರು(**ISA**), ಯುನಿಸೆಫ್ ರಾಜ್ಯ ಸಂಯೋಜಕರು ಹಾಗೂ **IEC-HRD** ರಾಜ್ಯ ಸಮಾಲೋಚಕರು, **PWC** ಸಮಾಲೋಚಕರು ತರಬೇತಿ ನೀಡಿದರು.





### ಸಮುದಾಯ ಬಾನುಲಿ ಕೇಂದ್ರಗಳಿಗೆ ತರಬೇತಿ:

ಮೇಲಿನ ಚಟುವಟಿಕೆಗಳಷ್ಟೇ ಅಲ್ಲದೆ ಇಲಾಖೆಯು 9 ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 10 ಸಮುದಾಯ ಬಾನುಲಿ ಕೇಂದ್ರಗಳನ್ನು **Empanelment** ಮಾಡಿಕೊಂಡಿದೆ. ಈ ಮೂಲಕ ಗ್ರಾಮೀಣ ಜನರಲ್ಲಿ ಕುಡಿಯುವ ನೀರು ಮತ್ತು ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುತ್ತಿದ್ದು ಪ್ರಸಕ್ತ ಮಾಹೆಯಲ್ಲಿ ಸ್ವಚ್ಛ ಸಂಕಲ್ಪದೊಂದಿಗೆ ಎಲ್ಲಾ ಸಮುದಾಯ ಬಾನುಲಿ ಕೇಂದ್ರಗಳಲ್ಲಿಯೂ **ದ್ರವ ತ್ಯಾಜ್ಯ ನಿರ್ವಹಣೆ ಮತ್ತು 100 ದಿನಗಳ ವಿಶೇಷ ಆಂದೋಲನ** ಕುರಿತು **Online** ಮೂಲಕ ದಿನಾಂಕ:9.12.2020ರಂದು ತರಬೇತಿ ನೀಡಲಾಯಿತು. ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯ ನಿರ್ದೇಶಕರು(**ISA**), ಉಪ ನಿರ್ದೇಶಕರು, ಸ್ವಚ್ಛ ಭಾರತ್ ಮಿಷನ್(ಗ್ರಾ) ತರಬೇತಿ ನೀಡಿದರು.